ಮಂಡಕೇರಿಯಲ್ಲಿ ವೈದ್ಯಕೀಯ ಕಾಲೇಜನ್ನು ತೆರೆಯುವ ಬಗ್ಗೆ.

೧೪೩೫. ಶ್ರೀ ಡಿ.ಎ. ಚಿನ್ನಪ್ಪ. (ಮಂಡಕೇರಿ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಮಂಡಕೇರಿಯಲ್ಲಿ ಒಂದು ವೈದ್ಯಕೀಯ ಕಾಲೇಜನ್ನು ತೆರೆಯಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಕಾಲೇಜು ತೆರೆಯಲು ವಿಳಂಬವಾದರೂ ತೊಂದರೆಗಳಿವೆಯೇ?

ಇ) ಮಂಡಕೇರಿಯ ಜನರು ಕಾಲೇಜನ್ನು ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರವು ಕಾಲೇಜನ್ನು ಮಂಜೂರು ಮಾಡುವುದೇ?

ಶ್ರೀ ಎಚ್. ಎಲ್. ತಿಮ್ಮೇಗೌಡ.— (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಈ ವಿಷಯದಲ್ಲಿ ವಿಶ್ವವಿದ್ಯಾನಿಲಯದ ವರದಿಯನ್ನು ಸರ್ಕಾರವು ಪರಿಶೀಲಿಸುವುದು.

ಸರ್ಕಾರಿ ಆಸ್ಪತ್ರೆಗಳಲ್ಲಿರುವ ಆರ್ಹ ರೋಗಿಗಳಿಗೆ ''ಓಪನ್ ಹಾರ್ಟ್'' ಮಂತ್ತು ''ಬೈಪಾಸ್ ಶಸ್ತ್ರ ಚಿಕಿತೆ '' ಮಾಡಬೇಕಾಗುವ ಸೌಲಭ್ಯದ ಬಗ್ಗೆ.

೧೩೦೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿರುವ ಆರ್ಹ ರೋಗಿಗಳಿಗೆ ''ಓಪನ್ ಹಾರ್ಟ್'' ಮತ್ತು ''ಬೈಪಾಸ್'' ಶಸ್ತ್ರ ಚಿಕಿತ್ಸೆ ಮಾಡಲು ಬೇಕಾಗುವ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಅಥವಾ ತೆಗೆದುಕೊಳ್ಳುವ ಕ್ರಮವೇನು?

ಇ) ಇದರ ಬಗ್ಗೆ ಸರ್ಕಾರವು ಜರೂರು ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಚ್. ಎಲ್. ತಿಮ್ಮೇಗೌಡ.— (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ), ಇ) ಬೆಂಗಳೂರಿನಲ್ಲಿ ಜಯದೇವ ಹೃದ್ರೋಗ ಸಂಸ್ಥೆಯನ್ನು ತೆರೆಯಲಾಗಿದೆ, ಇದು ಸದ್ಯದ ಬೇಡಿಕೆಯನ್ನು ಪೂರೈಸುತ್ತಿದೆ, ಅವಶ್ಯ ಬಿದ್ದರೆ ಇಂತಹ ಸೌಲಭ್ಯಗಳನ್ನು ಇತರೆ ಕಡೆ ಒದಗಿಸುವ ಸಾಧ್ಯತೆಯನ್ನು ಸರ್ಕಾರವು ಪರಿಶೀಲಿಸುವುದು.

ಹೆದಾ ರಿ ತಂಗುದಾಣಗಳ ಬಗ್ಗೆ.

೧೩೮೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ವಾರ್ತಾ ಯುವ ಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿರುವ ಹೆದ್ದಾರಿ ತಂಗುದಾಣಗಳ ಸಂಖ್ಯೆ ಎಷ್ಟು?

ಆ) ಕೋಲಾರ ಜಿಲ್ಲೆಯಲ್ಲಿರುವ ಹೆದ್ದಾರಿ ತಂಗುದಾಣಗಳ ಸಂಖ್ಯೆ ಎಷ್ಟು?

ಇ) ಮುಳಬಾಗಿಲಿನಲ್ಲಿ ಹೆದ್ದಾರಿ ತಂಗುದಾಣವನ್ನು ಆರಂಭವಾಗುವ ಯೋಜನೆ ಇದೆಯೇ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ.